ದಿನಾಂಕಃ 01–04–2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಶ್ರೀ ಕೆ.ಎಸ್ ಜೆ ವಕೀಲರಿಂದ ಪ್ರ 2 ವಾದಿ ನಂ 2 ರಿಂದ 4 ಇವರ ಪರವಾಗಿಃ**

ಮಲ್ಲೇಶಪ್ಪಾ ನೀರುಳ್ಳಿ ಎಂಬುವವರು ನನ್ನ ಅಣ್ಣ ತಮ್ಮಂದಿರ ಮಕ್ಕಳು ಆಗಬೇಕು. ರವಿ ಮಲ್ಲೇಶಪ್ಪಾ ನೀರುಳ್ಳಿ ಇವರು ನನಗೆ ತಮ್ಮನಾಗಬೇಕು. ಪ್ರತಿವಾದಿ ನಂ 1 ನನ್ನ ಅತ್ತಿಗೆ, ರವಿ, ನಿಜಗುಣಪ್ಪ, ರಮೇಶ, ಶಾಂತವ್ವ ಸುಶೀಲವ್ವ ಮತ್ತು ಶಂಕ್ರವ್ವ ಇವರು ನನ್ನ ತಮ್ಮ ಮತ್ತು ಸಹೋದರಿಯರಾಗಬೇಕು.

ದಾವೆಯನ್ನು ವಾದಿಯರು ಏನು ಪರಿಹಾರ ಬೇಡಿ ಸಲ್ಲಿಸಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ದಾವೆಯನ್ನು 398 ಸರ್ವೇ ನಂ ಆಸ್ತಿಯ ಮೇಲೆ ಮಾಡಲಾಗಿರುತ್ತದೆ. ಸದರಿ ಆಸ್ತಿಯ ಮೇಲೆ ಅಕ್ಕತಂಗಿಯರು ಹಿಸ್ಸೆ ಬೇಡಿ ಸಲ್ಲಿಸಿರುತ್ತಾರೆ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ರವಿ ಮಲ್ಲೇಶಪ್ಪಾ ನೀರುಳ್ಳಿ ಇವರ ಅಜ್ಜನಿಂದ ಬಂದ ಆಸ್ತಿ ಎಂದರೆ ಸರಿ. ಸದರಿ ಸರ್ವೇ ನಂ ಆಸ್ತಿಯ 1 ಎಕರೆ ಬೆಲೆ 1,00,00,000/– ಆಗುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಹಾವೇರಿ ರಸ್ತೆ ಮತ್ತು ಬಂಕಾಪೂರಕ್ಕೆ ಹತ್ತಿ ಇರುತ್ತದೆ ಎಂದರೆ ಸರಿಯಲ್ಲ. ಹಣ ಕೊಟ್ಟಿರುವುದಾಗಿ ಹೇಳಿದ್ದು ಅದನ್ನು ನನ್ನ ಸಮಕ್ಷಮ ಕೊಟ್ಟಿರುತ್ತಾರೆ. ಹಣವನ್ನು 10 ನೇ ತಿಂಗಳು 1990 ರಲ್ಲಿ ಕೊಟ್ಟಿರುತ್ತಾರೆ ದಿನಾಂಕ ನೆನಪಿಲ್ಲ. ವ್ಯವಹಾರದ ಮಾತುಕತೆಯು ಪ್ರತಿವಾದಿ ನಂ 7 ಇವರ ಮನೆಯಲ್ಲಿ ಆಗಿರುತ್ತದೆ. ಆ ದಿವಸ

ಸುಮಾರು 10 ರಿಂದ 15 ಜನರು ಸೇರಿದ್ದು ಇತ್ತು. ಅವರ ಹೆಸರು ಈಗ ನನಗೆ ಹೇಳಲು ಬರುವುದಿಲ್ಲ. ಆ ದಿವಸ ಸಂಚಕಾರ ಹಣವನ್ನು ಕೊಟ್ಟಿದ್ದು, ಮರುದಿವಸ ಬಾಂಡ ಮಾಡುವಾಗ ಹಣ ಕೊಟ್ಟಿರುತ್ತಾರೆ. ಹಾಗೆ ಎಷ್ಟು ಬಾಂಡ ಪೇಪರ ಮೇಲೆ ವ್ಯವಹಾರ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸಂಚಕಾರ ಮಾಡುವಾಗ 10,000/– ರೂಪಾಯಿ ಕೊಟ್ಟಿದ್ದು, ಬಾಂಡ ಪೇಪರ್ ಮಾಡುವಾಗ ಒಬ್ಬೊಬ್ಬರಿಗೆ 1,00,000/– ದಂತೆ 3,00,000/– ಹಣ ಕೊಟ್ಟಿರುತ್ತಾರೆ. ಹಣವನ್ನು ಚೆಕ್ ಮೂಲಕ ಕೊಟ್ಟಿರುತ್ತಾರೆ. ಹಾಗೆ ಚೆಕ್ಕು ನೀಡುವಾಗ ಎಷ್ಟು ಗಂಟೆಯಾಗಿತ್ತು ಎಂದು ಹೇಳಲು ಬರುವುದಿಲ್ಲ. ಪ್ರತಿವಾದಿ ನಂ 6 ಮತ್ತು 7 ಹಾಗೂ ರವಿ ಇವರ ಹೆಸರಿಗೆ ಒಂದೊಂದು ಚೆಕ್ಕು ಕೊಟ್ಟಿರುತ್ತಾರೆ. ಕಾಗದವನ್ನು ಮಾಡಿರುವುದಾಗಿ ಹೇಳುತ್ತಿದ್ದು ಅದನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸದರಿ ಕಾಗದದಲ್ಲಿ ಏನು ಬರೆದಿರುತ್ತಾರೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ.

ಸಾಕ್ಷ್ಯ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ನೀಡಿರುತ್ತೇನೆ. ರವಿ ಈತನು ಅತಿಯಾದ ಮದ್ಯ ಸೇವನೆ ಮಾಡುತ್ತಿದ್ದರು ಎಂದರೆ ಸರಿ. ನನ್ನ ಮತ್ತು ರವಿ ಇವರು ಮನೆಯ ಅಂತರ 200 ಮಿಟರ ಆಗಬಹುದು.

ಕಾಗದ ಪತ್ರ ಬರೆಯುವಾಗ ರವಿ ಇವರ ಹೆಂಡತಿ ಹಾಜರು ಇದ್ದರು. ಅವರ ಸಹಿಯನ್ನು ಕಾಗದ ಪತ್ರದ ಮೇಲೇ ಪಡೆದುಕೊಂಡಿಲ್ಲ. ನನಗೆ ಸಾಕ್ಷ್ಯನುಡಿಯಲು

ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ದಾವೆಯನ್ನು ನೂರಅಹ್ಮದ ಇವರು ಸಲ್ಲಿಸಿರುತ್ತಾರೆ. ಅವರ ಮತ್ತು ನಮ್ಮ ಮನೆ ಸಮೀಪದಲ್ಲಿ ಇರುತ್ತವೆ. ನಾನು ಅವರಿಗೆ ಅನುಕೂಲವಾಗುವುದರ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.